ಕಲೀಮ್ ಉಲ್ಲಾ

ಚಿಕ್ಕವರಿದ್ದಾಗ ಬೀದಿ ನಾಯಿಗಳಿಗೆ ಅಟ್ಟಾಡಿಸಿಕೊಂಡು ಹೊಡೆಯುವುದು ನಮಗೆಲ್ಲಾ ಒಂದು ದೊಡ್ಡ ಮನರಂಜನೆಯ ಕೆಲಸವೆನಿಸಿತ್ತು. ಕಲ್ಲಿನ ಹೊಡೆತ ತಿಂದು ಅವು ಕಂಯ್ಯೋ... ಮುರ್ರ್ರೋ... ಎಂದು ಕುಂಟುತ್ತಾ ಹೋಗುವುದನ್ನು ನೋಡಿದಾಗ ವಿಚಿತ್ರ ಖುಷಿಯಾಗುತ್ತಿತ್ತು. ಅವಕ್ಕೆ ನಾವೇನು ಊಟ ಹಾಕಿ ಸಾಕಿದವರಲ್ಲ. ಅವರಿವರ ಮನೆಯ ಹಳಸಿದ ಅನ್ನವುಂಡು ಬೆಳೆದ ಅವು ನಮ್ಮ ಪಾಲಿಗೆ ಯಾಕಾಗಿಯೋ ಏನೋ ಅನಗತ್ಯ ಶತ್ರುಗಳಾಗಿದ್ದವು. ಜನರೇ ಉಪವಾಸ ವನವಾಸದಲ್ಲಿ ಕಾಲ ನೂಕುತ್ತಿದ್ದ ಆ ಕಾಲದಲ್ಲಿ ಈ ಬಡಪಾಯಿಗಳು ಇನ್ನೆಷ್ಟು ಕಷ್ಟಪಟ್ಟು ಬದುಕಿದ್ದಿರಬಹುದು ನೀವೆ ಯೋಚಿಸಿ. ಯಾರಿಗೂ ಯಾವ ರೀತಿಯಿಂದಲೂ ತೊಂದರೆ ಕೊಡದ ಅವನ್ನು ನಾವೇಕೆ ಆ ಪರಿ ದ್ವೇಷಿಸಿದೆವೋ ಈಗಲೂ ನಾನರಿಯೆ.

ನಮ್ಮ ಬೀದಿಯಲ್ಲಿ ಸಾಕು ನಾಯಿ ಎಂದು ಇದ್ದದ್ದು ದಂಡಪಾಣಿ ನಾಯಿಯೊಂದೇ. ದಂಡಪಾಣಿ ಎಂಬುದು ಅದರ ಮಾಲೀಕನ ಹೆಸರು. ನಾವೆಲ್ಲಾ ದಂಡಪಾಣಿ ನಾಯಿ ಎಂದು ಕರೆದರೆ ಅದರ ಮಾಲೀಕ ಪ್ರೀತಿಯಿಂದ ರಾಣಿ ಎಂದು ಹೆಸರಿಟ್ಟಿದ್ದ. ಮೀನು ಹಿಡಿದು ಮಾರುವ ವೃತ್ತಿ ಮಾಡುತ್ತಿದ್ದ ದಂಡಪಾಣಿ ಹಗಲು ಹೊತ್ತಿನಲ್ಲಿ ತನ್ನ ನಾಯಿಯನ್ನು ತಾನೇ ಹಿಡಿದು ಎರ್ರಾಬಿರ್ರಿ ಚಚ್ಚುತ್ತಿದ್ದ. ರಾತ್ರಿಯಾದರೆ ಸಿಕ್ಕಾಪಟ್ಟೆ ರಮಿಸುತ್ತಿದ್ದ. ಬಿಸಿಲಿಗೆ ಒಣಗಲು ಹಾಸಿದ ಅವನ ಬಲೆಗಳನ್ನು ಎಷ್ಟೋ ಸಲ ಅವನ ನಾಯಿ ಚಿಣ್ಣಾಟವಾಡಿ ಹಾಳು ಮಾಡಿಬಿಡುತ್ತಿತ್ತು. ಅದು ಹೆಣ್ಣುನಾಯಿಯಾದ ಕಾರಣ ಅದಕ್ಕೆ ಕಂಪೆನಿ

